

ಎರಡು ಸಿಂಹಗಳ ದರ್ಶನವಾಯಿತು. ಅದೇ ಸಮಯದಲ್ಲಿ, ನಮ್ಮ ಜೀಪ್ ಕಡೆ ಓಡಿಬಂದ ಒಂಟಿ ಆನೆಯೊಂದು ಭಯದ ಕ್ಷಣಗಳನ್ನೇ ಸೃಷ್ಟಿಸಿತು.

## ಮರೆಯಲಾರದ ಸಂಜೆ

ಸೂರ್ಯನು ಅಸ್ತಮಿಸುತ್ತಿದ್ದಾಗ, ದಾರಿ ಮಧ್ಯದಲ್ಲಿ ನಮ್ಮ ಸಫಾರಿ ವಾಹನದ ಹಿಂಬದಿಯಲ್ಲಿ ಗುಂಪು ಗುಂಪಾಗಿ ಕಾಣಿಸಿಕೊಂಡ ಜಿರಾಫೆಗಳು, ಕೆಂಪು ಆಕಾಶದ ಹಿನ್ನೆಲೆಯಲ್ಲಿ ಅದ್ಭುತ ದೃಶ್ಯವನ್ನು ಮೂಡಿಸಿದ್ದವು. ಆ ಕ್ಷಣ, ಮಸಾಯಿ ಮಾರಾದ ವನ್ಯಲೋಕವು ನಮ್ಮ ಹೃದಯದಲ್ಲಿ ಅಚ್ಚಳಿಯದ ನೆನಪಾಗಿ ಉಳಿಯಿತು.

ರಾತ್ರಿ ನಾವು ತಂಗಿದ್ದ ಹೋಟೆಲ್‌ನಲ್ಲಿ ಸ್ಥಳೀಯ ಬುಡಕಟ್ಟು ಮಸಾಯಿ ಜನರು ಹಾಡು ಮತ್ತು ನೃತ್ಯದ ಮೂಲಕ ನಮಗೆ ಆತಿಥ್ಯ ನೀಡಿದರು. ಅವರ ತಾಳಮದ್ದಲೆ, ಪಾರಂಪರಿಕ ಹಾಡುಗಳು ಮತ್ತು ಉತ್ಸಾಹಭರಿತ ನೃತ್ಯಗಳು ಆನಂದದ ಕ್ಷಣಗಳನ್ನು ಉಣಬಡಿಸಿದವು. ಆಫ್ರಿಕಾದ ಜೀವಂತ ಸಂಸ್ಕೃತಿಯನ್ನು ಹತ್ತಿರದಿಂದ ಅನುಭವಿಸಿದ ಭಾವನೆ ಮೂಡಿತು.

## ವನ್ಯಜೀವಿಗಳ ಸಮೃದ್ಧ ಲೋಕ

ಮುಂದಿನ ಮೂರು ದಿನಗಳಲ್ಲಿ, ಬೆಳಿಗ್ಗೆ 4 ಗಂಟೆಗೆ ಎದ್ದು, ಉಪಾಹಾರ ಮುಗಿಸಿ ಮಧ್ಯಾಹ್ನಕ್ಕೆ ಲಂಚ್‌ಬಾಕ್ಸ್‌ಗಳನ್ನು ಪ್ಯಾಕ್ ಮಾಡಿಕೊಂಡು, ಬೆಳಿಗ್ಗೆ 5.30ಕ್ಕೆ ಸಫಾರಿಗೆ ಹೊರಟು, ಸಂಜೆ 6 ಗಂಟೆಗೆ ಮರಳುತ್ತಿದ್ದೆವು. ಈ ದೀರ್ಘ ಪಯಣ ಹಸಿರು ಮತ್ತು ಬಂಗಾರ ಮಿಶ್ರಿತ ವಿಸ್ತಾರ ಹುಲ್ಲುಗಾವಲುಗಳ ಮಧ್ಯೆ ಸಾಗುತ್ತಿತ್ತು.

ಪ್ರತಿದಿನವೂ ಹೊಸದಾಗಿ ಕಾಣಿಸಿಕೊಂಡ ವನ್ಯಜೀವಿಗಳಿಂದಾಗಿ ಮಸಾಯಿ ಮಾರಾ ನಮ್ಮ ಮನಸ್ಸನ್ನು ಸೂರೆಗೊಂಡಿತ್ತು. ಹೈನಾಗಳು, ಕಾಡೆಮ್ಮೆಗಳು, ಚಿರತೆಗಳು, ಸಿಂಹಗಳು, ಸಾವಿರಾರು ವೈಲ್ಡ್‌ಬೀಸ್ಟ್‌ಗಳು (ಒಂದು ಜಾತಿಯ ಕಾಡೆಮ್ಮೆ), ಕಾಡುಹಂದಿಗಳು, ನದಿ ನೀರಿನಲ್ಲಿ ಮಲಗಿ ಹೆಬ್ಬಂಡೆಗಳಂತೆ ಕಾಣುತ್ತಿದ್ದ ಹಿಪ್ಪೊಗಳು, ನೀರಿನಲ್ಲಿ ತೇಲುತ್ತಿದ್ದ ಮೊಸಳೆಗಳು, ಪ್ರತಿಯೊಂದು ಪ್ರಾಣಿ, ಪ್ರತಿ ದೃಶ್ಯವೂ ಕಣ್ಣಿಗೆ ಹೊಸತೆನಿಸಿತ್ತು. ತನ್ನ ಬೇಟೆಯನ್ನು ಮರದ ಮೇಲೆ ಹೊತ್ತು ತಿನ್ನುತ್ತಿದ್ದ ಚಿರತೆಯನ್ನು ಕಂಡಾಗ ವನ್ಯಮೃಗಗಳ ಜಗತ್ತಿನ ದರ್ಶನವಾಯಿತು.

ಹದಿನಾಲ್ಕು ಸಿಂಹಗಳ ಗುಂಪನ್ನು ಏಕಕಾಲದಲ್ಲಿ ನೋಡುವ ಅವಕಾಶ ಒಮ್ಮೆ ದೊರಕಿತು. ಮೊದಲಿಗೆ ಎಲ್ಲ ಸಿಂಹಗಳು ಮೌನವಾಗಿ ಮಲಗಿದ್ದವು. ಅರ್ಧ ಗಂಟೆಯ ನಂತರ ಒಂದೊಂದಾಗಿ ತಮ್ಮ ದಿನಚರಿ ಆರಂಭಿಸಿದಾಗ, ಕಾಡಿನ ರಾಜಕುಟುಂಬಸ್ಥರ ವೈಭವ ನಮ್ಮ ಕಣ್ಣ ಮುಂದೆ ಜೀವಂತವಾಗಿದ್ದಂತೆ ಎನಿಸಿತು. ಎಲ್ಲ ಸಿಂಹಗಳು ಎದ್ದು, ನಮ್ಮ ಸಫಾರಿ ಜೀಪ್ ಮುಂದೆ ಹಿಂದೆ ಓಡಾಡತೊಡಗಿದ್ದು ಸಂತೋಷ ಮತ್ತು ಭಯ ಎರಡೂ ಒಟ್ಟಿಗೆ ಉಂಟಾದ ನಮ್ಮ ಪ್ರವಾಸದ ಮರೆಯಲಾಗದ ಅನುಭವ.

## ಸೆರೆಂಗೆಟಿ ರಾಷ್ಟ್ರೀಯ ಉದ್ಯಾನ

ಮೂರು ದಿನಗಳ ಕಾಲ ವನ್ಯಮೃಗಗಳ ಒಡನಾಟಕ್ಕೆ ಅವಕಾಶ ನೀಡಿದ್ದ ಮಸಾಯಿ ಮಾರಾಗೆ ಪ್ರೀತಿಯ ವಿದಾಯ ಹೇಳಿ ಹೊರಟ ನಾವು, ಕಠಿಣ ರಸ್ತೆ ಪ್ರಯಾಣದ ಮೂಲಕ ಕೀನ್ಯಾದ ಗಡಿ ದಾಟಿ ತಾಂಜಾನಿಯಾದ ಸಣ್ಣ ಪಟ್ಟಣಗಳ ಮೂಲಕ ಸೆರೆಂಗೆಟಿ ರಾಷ್ಟ್ರೀಯ ಉದ್ಯಾನ ತಲುಪಿದೆವು. 50 ಕಿಲೋಮೀಟರ್ ವಿಸ್ತಾರವಾದ ವನ್ಯಪ್ರದೇಶ, ಹುಲ್ಲುಗಾವಲುಗಳು ಮತ್ತು ನಿಸರ್ಗ ರಮಣೀಯ ದೃಶ್ಯಗಳನ್ನು ಆನಂದಿಸುತ್ತಾ ಸಾಗಿದ ನಂತರ, ನಾವು ಮುಂಚಿತವಾಗಿ ಬುಕ್ ಮಾಡಿಕೊಂಡಿದ್ದ ಶಿಬಿರಕ್ಕೆ ಬಂದಿಳಿದೆವು. ನಮ್ಮ ಶಿಬಿರದ 100 ಮೀಟರ್ ಅಂತರದಲ್ಲೇ ಜೀಬ್ರಾಗಳು, ಕಾಡೆಮ್ಮೆಗಳು, ವೈಲ್ಡ್‌ಬೀಸ್ಟ್‌ಗಳು, ಆನೆಗಳು ತಿರುಗಾಡುತ್ತಿದ್ದವು. ವನ್ಯಪ್ರಾಣಿಗಳು ಹತ್ತಿರದಲ್ಲೇ ತಿರುಗಾಡುತ್ತಿದ್ದುದರಿಂದ ಪ್ರತಿಯೊಂದು ಕ್ಷಣವೂ ಹೃದಯ ಬಡಿತ ಹೆಚ್ಚಿದಂಥ ಅನುಭವವಾಗುತ್ತಿತ್ತು.

ಶಿಬಿರದ ಸಹಾಯಕರು ಯಾವುದೇ ಕಾರಣಕ್ಕೂ ಶಿಬಿರದ ಹದ್ದಿನ ಕಣ್ಗಾವಲಿನಾಚೆಗೆ ಹೋಗಬಾರದು ಎಂದು ಕಟ್ಟುನಿಟ್ಟಿನ ಸೂಚನೆ



ನೀರಿನಲ್ಲಿ ಹೆಬ್ಬಂಡೆಗಳಂತೆ ಕಾಣುತ್ತಿರುವ ಹಿಪ್ಪೊಗಳು